ಕಲ್ಪನೆ ಕಾವ್ಯ

## ಮರಿಗುಂಡಿನ ಸ್ವಗತ

ಗುರುತ್ವದ ಗುರುತರ ಶಕ್ತಿಗೆ
ಮನದ ಹಸ್ತದಿ ನಮೋ ನಮಃ


ಸೋಪಾನಗಳು ಕರೆಯುತಿವೆ
ಹಿರಿಬಂಡೆ ಉರುಳಿ ಬರಲು
ಮರಿಗುಂಡಿದು ಬಿಡಲೊಲ್ಲದು
ಕರುಳ ಬಳ್ಳಿ ಕಟ್ಟಿ ಬಿಗಿದು

ಬಂಡೆ ಶಿಲೆಯ ಲೋಕವಿದು
ನಮ್ಮ ರಾಜ್ಯ ನೀನೇ ರಾಜ
ನೀಲಿ ಬಾನು ಹಕ್ಕಿ ಹಾಡು
ಮೋಡ ಮಳೆಯ ಶುಭ್ರ ಬೀಡು

ಕರೆಯುತಿಹನು ಕೆಳಗೆ ನರನು
ಮೆಟ್ಟಿಲುಗಳ ಹಾದಿ ಹಾಸಿ
ಕೆರಳಬೇಡ ಉರುಳಬೇಡ
ಮತ್ತೆ ಹೊರಳಿ ಬಾರ ನೋಡ

ಹಸಿರುವನ ನದಿ ಗಿರಿಗಳ ನಿತ್ಯ ಹನನ
ಇಂಗುತಿಲ್ಲವಿನ್ನು ದಾಹವದು ನರನ
ನಮ್ಮ ಲೋಕದೊಳಗೆ ಇನ್ನೂ
ಮಿಡಿಯುತಿದೆ ಜೀವನಾಡಿ
ಮರುಳಾಗಿ ಕೆಳಗೆ ಉರುಳಿದೆಯೋ
ನೀನಾಗುವೆ ಶಿಲೆಯ ಪುಡಿ.

**-ಆರ್.ಟಿ. ಶರಣ್, ಕಲಬುರಗಿ**



## ಮಹಾ ದರ್ಶನ

ಯಾವುದು ದೊಡ್ಡದು?
ಯಾವುದು ಚಿಕ್ಕದು
ಗಾತ್ರದಲ್ಲಿ ಹಿರಿದೋ?
ದೊಡ್ಡದನು ದೊಡ್ಡದಾಗಿಸಿದ ಕಿರಿದೋ?
ನಮಗೆ ದಕ್ಕುವುದು ಕೊನೆಗೂ
ಗಾತ್ರದ ಮಿತಿಯೇ

ತಾನೇ ಆಯಿತೇ
ಬೃಹತ್ತೆಂಬುದು?
ಹೊಂದಿ ಒಂದಕೊಂದು ಅಣು
ಬೆಸೆದು ಒಂದು ಅಣುವನಿನ್ನೊಂದು
ನಿಲಿಸಿದನು
ತಾವು ನಿಂತಿವೆ
ಕಂಡೂ ಕಾಣದಂತೆ
ಇದ್ದೂ ಇಲ್ಲದಂತೆ

ಕಂಡದ್ದರ ಹಿಂದೊಂದು
ಕಾಣ್ಕೆ
ನೋಟಕ್ಕೆ ನಿಲುಕದ ಅಣುವಿನಾಯ್ಕೆ
ಸಣ್ಣ ಸಂಗತಿಯೂ ಕಾರಣಗೊಂಡು
ಹುಟ್ಟಿತಿಲ್ಲಿ ಮಹತ್ತು
'ಹೊತ್ತು ಇದ್ದೂ ಇರದಂತಿರು
ಎನುವ ಮಹಾದರ್ಶನ'

**-ಸಮುದ್ಯತಾ ವೆಂಕಟರಾಮು, ಸಾಗರ**